# ಕರ್ನಾಟಕ ಸರ್ಕಾರ

## ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು, ಇವರು ಹೊರಡಿಸಿರುವ ನಡವಳಿಗಳು

ವಿಷಯ- 2022-23ನೇ ಸಾಲಿನಲ್ಲಿ 4 ವಿಭಾಗಗಳಲ್ಲಿ ವಿವಿಧ ಇಲಾಖೆಗಳ ಸಹಕಾರದೊಂದಿಗೆ "ಯುವ ಮೇಳ" ಹಾಗೂ ಇತರೆ ಐಇಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ-
1. 2022-23ನೇ ಸಾಲಿನ ಕ್ರಿಯಾ ಯೋಜನೆಯ ಅನುಮೋದನೆ ಪತ್ರ ಸಂ:ಮಮಇ:53: ಸ್ತ್ರೀಮರ:2022, ಬೆಂಗಳೂರು ದಿನಾಂಕ:11.05.2022.
2. ಸರ್ಕಾರದ ಆದೇಶ ಸಂ:ಮಮಇ114 ಮಮಅ 2022, ಬೆಂಗಳೂರು ದಿನಾಂಕ:04.06.2022. ಮತ್ತು ದಿನಾಂಕ:11.07.2022.

*******

**ಪ್ರಸ್ತಾವನೆ:-**

2022-23ನೇ ಸಾಲಿನಲ್ಲಿ ಬಾಲ್ಯವಿವಾಹ ನಿಷೇಧ ಕುರಿತು ಯುವಜನಾಂಗದಲ್ಲಿ ಅರಿವು ಮೂಡಿಸಲು ವಿವಿಧ ಇಲಾಖೆಗಳ ಸಹಕಾರದೊಂದಿಗೆ "ಯುವ ಮೇಳ" ಹಾಗೂ ಇತರೆ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ಉಲ್ಲೇಖ(1)ರ 2022-23ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ರೂ.20.00 ಲಕ್ಷಗಳನ್ನು ಮೀಸಲಿರಿಸಿ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ 2022-23ನೇ ಸಾಲಿಗೆ ಬಾಲ್ಯ ವಿವಾಹ ನಿಷೇಧ ಉಸ್ತುವಾರಿ ಕೋಶಕ್ಕೆ 1 ಕಂತಿನಲ್ಲಿ ರೂ.18.75 ಲಕ್ಷಗಳು ಮತ್ತು 2ನೇ ಕಂತಿನಲ್ಲಿ ರೂ.18.75 ಲಕ್ಷಗಳು ಸೇರಿದಂತೆ ಒಟ್ಟು ರೂ.37.50 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾನದಲ್ಲಿ ಕ್ರಿಯಾ ಯೋಜನೆಯಲ್ಲಿ ಅನುಮೋದಿಸಿದಂತೆ, ವಿಭಾಗ ಮಟ್ಟದಲ್ಲಿ ವಿವಿಧ ಇಲಾಖೆಗಳ ಸಹಕಾರದೊಂದಿಗೆ "ಯುವ ಮೇಳ" ಹಾಗೂ ಇತರೆ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ಒಟ್ಟು ರೂ.20.00 ಲಕ್ಷಗಳ ಅನುದಾನವನ್ನು ಬೆಳಗಾವಿ ವಿಭಾಗದ ಬೆಳಗಾವಿ ಜಿಲ್ಲೆ, ಮೈಸೂರು ವಿಭಾಗದ ಚಾಮರಾಜನಗರ ಜಿಲ್ಲೆ, ಕಲಬುರ್ಗಿ ವಿಭಾಗದ ಯಾದಗಿರಿ ಜಿಲ್ಲೆ ಹಾಗೂ ಬೆಂಗಳೂರು ವಿಭಾಗದ ತುಮಕೂರು ಜಿಲ್ಲೆಗಳ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸಂಖ್ಯೆ:ಮಮಅಇ/ಬಾವಿನಿಕೋ/ಆಯವ್ಯಯ/01/2022-23

ನಿರ್ದೇಶಕರ ಕಚೇರಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
1ನೇ ಮಹಡಿ, ಬಹುಮಹಡಿಗಳ ಕಟ್ಟಡ
ಬೆಂಗಳೂರು. ದಿನಾಂಕ:05.01.2023

**ಆದೇಶ:**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳನ್ವಯ ಬಾಲ್ಯ ವಿವಾಹ ನಿಷೇಧ ಕಾಯ್ದೆ ಅನುಷ್ಠಾನ ಕಾರ್ಯಕ್ರಮಕ್ಕೆ ಕುರಿತಂತೆ "ಯುವ ಮೇಳ" ಹಾಗೂ ಇತರೆ ಐಇಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಳಗಾವಿ,

ಚಾಮರಾಜನಗರ, ಯಾದಗಿರಿ ಹಾಗೂ ತುಮಕೂರು ಜಿಲ್ಲೆ ರವರಿಗೆ ಲೆಕ್ಕ ಶೀರ್ಷಿಕೆ 2235-02-102-0-24-100 ಅಡಿ 2022-23ನೇ ಸಾಲಿನ ಅನುದಾನದಲ್ಲಿ ಪ್ರತಿ ಜಿಲ್ಲೆಗೆ ರೂ.5.00 ಲಕ್ಷಗಳಂತೆ ಒಟ್ಟು ರೂ.20.00 ಲಕ್ಷಗಳನ್ನು ಬಿಡುಗಡೆ ಮಾಡಿ ಆದೇಶಿಸಿದೆ.

ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು

**ಪ್ರತಿಯನ್ನು ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ:-**

1. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಮಾಹಿತಿಗಾಗಿ.
2. ಜಿಲ್ಲಾಧಿಕಾರಿಗಳು, ಬೆಳಗಾವಿ, ಚಾಮರಾಜನಗರ, ಯಾದಗಿರಿ ಹಾಗೂ ತುಮಕೂರು ರವರ ಮಾಹಿತಿಗಾಗಿ.
3. ಜಂಟಿ ನಿಯಂತ್ರಕರು, ಲೆಕ್ಕ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಧಾನ ಕಚೇರಿ ಬೆಂಗಳೂರು ಇವರಿಗೆ ಅನುದಾನವನ್ನು ಕೆ2 ನಲ್ಲಿ ಅಳವಡಿಸುವ ಮುಂದಿನ ಕ್ರಮಕ್ಕಾಗಿ.
4. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಳಗಾವಿ, ಚಾಮರಾಜನಗರ, ಯಾದಗಿರಿ ಹಾಗೂ ತುಮಕೂರು ರವರು ಸದರಿ ಆದೇಶದೊಂದಿಗೆ ಹೊರಡಿಸುವ ಮಾರ್ಗಸೂಚಿಯಂತೆ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಪಾಲಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ವರದಿ ಹಾಗೂ ಉಪಯುಕ್ತತಾ ಪ್ರಮಾಣ ಪತ್ರವನ್ನು ಪ್ರಧಾನ ಕಚೇರಿಗೆ ಸಲ್ಲಿಸುವುದು.
5. ಜಿಲ್ಲಾ ಮಟ್ಟದ ಕಾರ್ಯಕ್ರಮ ಹಮ್ಮಿಕೊಳ್ಳಲು ಜಿಲ್ಲೆಯಲ್ಲಿ ಯಾವುದಾದರೂ ಯೋಜನೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಆಯ್ಕೆ ಮಾಡಿ ಅನುದಾನ ಮರುಬಿಡುಗಡೆಗೊಳಿಸಿ ಸದರಿಯವರಿಂದ ವೆಚ್ಚ ಭರಿಸುವುದು. (ಮೇಲು ಸಹಿ ಉಪನಿರ್ದೇಶಕರ ಹಂತದಲ್ಲಿಯೇ ನಿರ್ವಹಿಸುವುದು)
6. ತಾಲ್ಲೂಕು ಮಟ್ಟದ ಕಾರ್ಯಕ್ರಮವನ್ನು ಆಯೋಜಿಸಲು ಜಿಲ್ಲಾ ಸಮಿತಿಯಲ್ಲಿ ಆಯ್ಕೆ ಮಾಡಿ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಯವರಿಗೆ ಅನುದಾನ ಮರುಬಿಡುಗಡೆಗೊಳಿಸಿ ವೆಚ್ಚ ಭರಿಸುವುದು.

## ಮಾರ್ಗಸೂಚಿ

1. ವಿವಾಹ ಕುರಿತಂತೆ ಯುವಜನತೆಯಲ್ಲಿ ಬಾಲ್ಯವಿವಾಹದಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಲು ರಾಜ್ಯದ 4 ವಿಭಾಗಗಳಲ್ಲಿ ಅತಿ ಹೆಚ್ಚು ಬಾಲ್ಯವಿವಾಹ ಪ್ರಕರಣಗಳು ದಾಖಲಾಗಿರುವ ಜಿಲ್ಲೆಯನ್ನು ಗಮನದಲ್ಲಿ ಇಟ್ಟುಕೊಂಡು ಆ ಜಿಲ್ಲೆಗೆ ಯುವ ಮೇಳ ಕಾರ್ಯವನ್ನು ಹಮ್ಮಿಕೊಳ್ಳಲು ಮಾರ್ಗ ಸೂಚಿಯನ್ನು ಹೊರಡಿಸಲಾಗಿರುತ್ತದೆ.

2. ರಾಜ್ಯದ 4 ವಿಭಾಗಗಳಲ್ಲಿ ಯುವ ಜನ ಮೇಳ ಕೈಗೊಳ್ಳಬೇಕಾಗಿರುವ ಜಿಲ್ಲೆಗಳು:-
   ಮೈಸೂರು- ಚಾಮರಾಜನಗರ
   ಬೆಳಗಾವಿ-ಬೆಳಗಾವಿ
   ಗುಲ್ಬರ್ಗಾ- ಯಾದಗಿರಿ
   ಬೆಂಗಳೂ ರು- ತುಮಕೂರು.

3. ವಿಭಾಗಗಳಲ್ಲಿ ಅತಿ ಹೆಚ್ಚು ಬಾಲ್ಯವಿವಾಹ ಪ್ರಕರಣರ ನಡೆದಿರುವ ಹಾಗೂ ಯುವ ಜನತೆಗೆ ಅರಿವು ಮೂಡಿಸುವ ಅಗತ್ಯೆಗೆ ಅನುಗುಣವಾಗಿ ಈ 4 ಜಿಲ್ಲೆಗಳಲ್ಲಿ ಹಾಗೂ ಪ್ರತಿ ಜಿಲ್ಲೆಯ 4 ತಾಲ್ಲೂಕುಗಳಲ್ಲಿ ಯುವ ಮೇಳ ನಡೆಸಲು ಕಾರ್ಯಕ್ರಮ ರೂಪಿಸಿ ಆಯೋಜಿಸುವುದು.

4. ಯುವ ಮೇಳ ನಡೆಸಲು ಉದ್ದೇಶಿಸಲಾಗಿರುವ ಜಿಲ್ಲೆಯಲ್ಲಿ ಈಗಾಗಲೇ ಜಿಲ್ಲಾಮಟ್ಟದಲ್ಲಿ ಬಾಲ್ಯವಿವಾಹ ನಿಷೇಧ ಕುರಿತು ರಚಿಸಲಾಗಿರುವ ಸಮನ್ವಯ ಸಮಿತಿ ಹಾಗೂ ಪರಿಶೀಲನಾ ಸಮಿತಿಯಲ್ಲಿ ಯುವ ಮೇಳ (ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ) ರೂಪುರೇಷೆ ಸಿದ್ದಪಡಿಸಿ, ಕಾರ್ಯಕ್ರಮದ ಮೇಲ್ವಿಚಾರಣೆ ಮಾಡಿ ಯಶಸ್ವಿಯಾಗಿ ನಡೆಸಲು ಕ್ರಮಕೈಗೊಳ್ಳುವುದು.

5. ಯುವ ಜನ ಮೇಳ ಆಯೋಜನೆ ಸಂಬಂಧ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮದ ರೂಪು ರೇಷೆಗಳನ್ನು ಸಿದ್ದಪಡಿಸಿ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳ ಸಹಕಾರ ಹಾಗೂ ಸಹಯೋಗದೊಂದಿಗೆ ಉಪಸಮಿತಿಗಳನ್ನು ರಚಿಸಿ ಉಪಸಮಿತಿಗಳಿಗೆ ಜವಾಬ್ದಾರಿಗಳನ್ನು ನೀಡಿ ಯುವಜನ ಮೇಳ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಅಗತ್ಯ ಕ್ರಮವಹಿಸುವುದು.

6. ವಿಭಾಗ ಮಟ್ಟದಲ್ಲಿ ಆಯ್ಕೆಯಾದ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳಲ್ಲಿ ಅತಿ ಹೆಚ್ಚಿಗೆ ಬಾಲ್ಯವಿವಾಹ ನಡೆದಿರುವ ಹಾಗೂ ಬಾಲ್ಯವಿವಾಹ ನಡೆಸಲು ಪ್ರಯತ್ನಿಸಿರುವ ಹಾಗೂ ಯಾವ ಸಮುದಾಯಗಳಲ್ಲಿ ಅತಿ ಹೆಚ್ಚು ಬಾಲ್ಯವಿವಾಹ ಪ್ರಕರಣಗಳು ನಡೆಯುವ ಸಂಬಂಧವಿರುತ್ತದೆ ಎಂಬುದರ ಅಂಕಿ ಸಂಖ್ಯೆ ಆಧಾರದ ಮೇಲೆ ಜಿಲ್ಲಾ ಮಟ್ಟದ ಆಯಾ ಜಿಲ್ಲಾಧಿಕಾರಿಗಳ ಸಮಿತಿಯ ಅಧ್ಯಕ್ಷತೆಯಲ್ಲಿ ತಾಲ್ಲೂಕುಗಳನ್ನು ಆಯ್ಕೆ ಮಾಡಿ, ಆಯ್ಕೆಯಾದ ತಾಲ್ಲೂಕುಗಳಲ್ಲಿ ಜಿಲ್ಲಾ ಮಟ್ಟದ ಯುವ ಜನ ಮೇಳವನ್ನು ನಡೆಸಲು ಕ್ರಮವಹಿಸುವುದು.

7. ಯುವ ಮೇಳದಲ್ಲಿ ತಾಲ್ಲೂಕಿನಲ್ಲಿರುವ 15 ವರ್ಷದಿಂದ 25 ವರ್ಷದೊಳಗಿನ ವಯೋಮಾನದ ಯುವಕ ಹಾಗೂ ಯುವತಿಯರನ್ನು ಗಮನದಲ್ಲಿಟ್ಟುಕೊಂಡು ಸ್ಥಳೀಯ ಸಮಸ್ಯೆಗಳು ಹಾಗೂ ಆಗತ್ಯತೆಗೆ ತಕ್ಕಂತೆ ಕಾರ್ಯಕ್ರಮವನ್ನು ರೂಪಿಸುವುದು.

8. ಯುವಜನ ಮೇಳ ಕಾರ್ಯಕ್ರಮದಲ್ಲಿ ಹದಿಹರೆಯದ ಹೆಣ್ಣುಮಕ್ಕಳನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಹದಿಹರೆಯದಲ್ಲಿ ವಿವಾಹವಾಗುವುದರಿಂದ ಅಪ್ರಾಪ್ತ ಹೆಣ್ಣು ಮಗುವಿಗೆ ಮದುವೆ ಮಾಡಿದರೆ, ಮಾನಸಿಕವಾಗಿ ಶಾರೀರಕವಾಗಿ, ಮಗುವನ್ನು ಹೊಂದಲು ಸಮರ್ಥರಿಲ್ಲದೆ ಇರುವುದರಿಂದ ಉಂಟಾಗುವ ಆರೋಗ್ಯ ಅಪೌಷ್ಠಿಕತೆ, ರಕ್ತಹೀನತೆ, ಹಾಗೂ

ಕಡಿಮೆ ತೂಕದ ಮಕ್ಕಳು ಜನಿಸುವುದರಿಂದ ಅವರಿಗೆ ಆರೋಗ್ಯ ಇಲಾಖೆ ವತಿಯಿಂದ ಸ್ಲೈಡ್ ಗಳ ಕಿರು ಚಿತ್ರದ ಮೂಲಕ ಅರಿವು ಮೂಡಿಸಲು ಕ್ರಮವಹಿಸುವುದು ಹಾಗೂ ಬಾಲ್ಯವಿವಾಹಕ್ಕೊಳಗಾಗುವ ಮಗು ಸಾಮಾಜಿಕವಾಗಿ ಕುಟುಂಬದೊಡನೆ ಹೊಂದಾಣಿಕೆಯಾಗಲು ಹಾಗೂ ಅತಿ ಸಣ್ಣ ವಯಸ್ಸಿಗೆ ಕುಟುಂಬದ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿರುವುದರಿಂದ ಮಾನಸಿಕ ಖಿನ್ನತೆ, ಹಾಗೂ ಕೌಟುಂಬಿಕ ಹೊಂದಾಣಿಕೆ ಉಂಟಾಗುವ ಸಾಧ್ಯತೆ ಬಗ್ಗೆ ಸ್ವಯಂ ಸಂಸ್ಥೆಗಳ ಮೂಲಕ ಬೀದಿ ನಾಟಕ, ಕಿರು ನಾಟಕ, ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕ್ರಮವಹಿಸುವುದು. ಬಾಲ್ಯವಿವಾಹ ನಡೆಸಿದರೆ ಉಂಟಾಗುವ ಕಾನೂನು ತೊಡಗಕುಗಳು ಹಾಗೂ ಕಾನೂನು ಕ್ರಮ, ಶಿಕ್ಷೆ ವಿಧಾನ, ಶಿಕ್ಷೆಗೆ ಒಳಪಡುವವರು ಮುಂತಾದ ವಿವರಗಳ ಬಗ್ಗೆ ಪೊಲೀಸ್ ಹಾಗೂ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದೊಂದಿಗೆ ಅರಿವು ಕಾರ್ಯಕ್ರಮಗಳನ್ನು ರೂಪಿಸುವುದು.

9. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಯುವ ಜನ ಮೇಳವನ್ನು ನಡೆಸಲು ನಿರ್ಧರಿಸಲ್ಪಟ್ಟ ನಂತರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಭಾಗೀದಾರ ಇಲಾಖಾಗಳ ಜಿಲ್ಲಾಮಟ್ಟದ ಅಧಿಕಾರಿಗಳನ್ನು ಆಹ್ವಾನಿಸಿ ಅವರ ಇಲಾಖೆಯಲ್ಲಿ ಇರುವ ಐಇಸಿ ಕಾರ್ಯಕ್ರಮದಡಿ ಮಾಹಿತಿ ಕರಪತ್ರಗಳು, ಬ್ಯಾನರ್, ಪೋಸ್ಟರ್, ಜಿಲ್ಲಾ ವ್ಯಾಪ್ತಿಯಲ್ಲಿ ಸಂಚರಿಸುವ ಮಾಹಿತಿ ವಾಹನ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

10. ಜಿಲ್ಲೆಯಲ್ಲಿ ಕಾರ್ಯಕ್ರಮವನ್ನು ಆಯೋಜಿಸುವ ಪೂರ್ವದಲ್ಲಿ 15 ರಿಂದ 25 ವರ್ಷದೊಳಗಿನ ಯುವಕ/ಯುವತಿಯರಿಗೆ Metric, ಪದವಿ ಪೂರ್ವ, ಪದವಿ 3 ಹಂತದಲ್ಲಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ಸಾಂಸ್ಕೃತಿಕ ಕ್ರೀಡಾ ಸ್ಪರ್ಧೆ ಕಿರು ನಾಟಕ ಪ್ರದರ್ಶನ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಿ ಅವರಿಗೆ ಬಾಲ್ಯವಿವಾಹ ವಿಷಯಕ್ಕೆ ಸಂಬಂಧಿಸಿದಂತೆ ಅರಿವು ಮೂಡಿಸುವುದರ ಜೊತೆಗೆ ಜಾಗೃತಿ ಮೂಡಿಸಲು ಕಾರ್ಯಕ್ರಮ ಆಯೋಜಿಸುವುದು.

❖ **ಯುವ ಮೇಳ ನಡೆಸಲು ಅಗತ್ಯ ನಿಬಂಧನೆಗಳು:-**

i. ಯುವ ಮೇಳ ಕಾರ್ಯಕ್ರಮವನ್ನು ಸರ್ಕಾರಿ ಕ್ರೀಡಾ ಭವನ, ಸಮುದಾಯ ಭವನ, ಮುಂತಾದ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿಯೇ, ಕಡ್ಡಾಯವಾಗಿ ಕಾರ್ಯಕ್ರಮ ನಡೆಸುವುದು, ಬಾಡಿಗೆ ಪಾವತಿಸಲು ಅವಕಾಶವಿರುವುದಿಲ್ಲ.

ii. 15 ರಿಂದ 25 ವರ್ಷದ ವಯೋಮಾನದ ಯುವಕ ಹಾಗೂ ಯುವತಿಯರಿಗೆ, ಕೇಂದ್ರು ಬಿಂದುವಾಗಿ ಕ್ರೀಡಾ ಮತ್ತು ಯುವಜನ ಸಬಲೀಕರಣ ಇಲಾಖೆ, ನೆಹರು ಯುವ ಕೇಂದ್ರುದ ಸಹಯೋಗದೊಂದಿಗೆ ಕಾರ್ಯಕ್ರ ಮಗಳನ್ನು ರೂಪಿಸುವುದು.

iii. ಜಿಲ್ಲಾ ಮಟ್ಟದ ಯುವ ಮೇಳ ಕಾರ್ಯಕ್ರಮಕ್ಕೆ ರೂ.2.20 ಲಕ್ಷಗಳ ಅನುದಾನ ನಿಗದಿಪಡಿಸಿದ್ದು, ಯುವ ಮೇಳದಲ್ಲಿ 500 ಯುವಕ/ಯುವತಿಯರು ಭಾಗವಹಿಸುವಂತೆ ಕ್ರಮವಹಿಸುವುದು.

iv. ತಾಲ್ಲೂಕು ಮಟ್ಟದ ಕಾರ್ಯಕ್ರಮಕ್ಕೆ ರೂ.70 ಸಾವಿರ ಅನುದಾನ ನಿಗದಿಪಡಿಸಿದ್ದು, 250 ಯುವಕ/ಯುವತಿಯರು ಭಾಗವಹಿಸುವಂತೆ ಕ್ರಮವಹಿಸುವುದು.

v. ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಯುವಜನ ಮೇಳ ಕಾರ್ಯಕ್ರಮಕ್ಕೆ ಚುನಾಯಿತ ಪ್ರತಿನಿಧಿಗಳು, ಸಾರ್ವಜನಿಕರು, ಇಲಾಖಾ ಅಧಿಕಾರಿಗಳು, ಸಿಬ್ಬಂದಿಗಳು, ಮುಂತಾದವರು ಹಾಗೂ ಸ್ಥಳೀಯ ಸಂಸ್ಥೆಗಳನ್ನು ಭಾಗವಹಿಸುವಂತೆ ಕ್ರಮವಹಿಸುವುದು.

vi. ಕಾರ್ಯಕ್ರಮವನ್ನು ಜನವರಿ 2023ರ ಒಳಗೆ ಪ್ರಾರಂಭಿಸಿ ಫೆಬ್ರವರಿ-2023ರ ಒಳಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿ ವರದಿ ಸಲ್ಲಿಸುವುದು.

vii. ಸ್ಪರ್ಧೆಗಳು, ವಿಚಾರ ಸಂಕೀರ್ಣ, ಪೋಸ್ಟರ್, ಕರುಪತ್ರಗಳು, ಕಿರುನಾಟಕ, ಎಲ್ಲವನ್ನೂ ಬಾಲ್ಯವಿವಾಹಕ್ಕೆ ಸಂಬಂಧಪಟ್ಟಂತೆ ಅನುಷ್ಠಾನಗೊಳಿಸುವುದು.

viii. ಕಾರ್ಯಕ್ರಮ ನಡೆಸುವ ಜಿಲ್ಲಾ/ ತಾಲ್ಲೂಕು ಕೇಂದ್ರ ಗಳಲ್ಲಿ ಕನಿಷ್ಠ 5 ಸ್ಥಳಗಳಲ್ಲಿ ಸ್ಪರ್ಧೆಯನ್ನು ಆಯೋಜಿಸಬೇಕು.

ix. ಕಾರ್ಯಕ್ರಮದ ಕರ್ನಾಟಕ ಪಾರದರ್ಶಕ ಅಧಿನಿಯಮದಡಿ ವೆಚ್ಚಭರಿಸತಕ್ಕದು.

x. ಯುವಜನ ಮೇಳದಲ್ಲಿ ಬಾಲ್ಯವಿವಾಹಕ್ಕೆ ಪ್ರೋತ್ಸಾಹಿಸುವುದಿಲ್ಲ, ನಡೆಸುವುದಿಲ್ಲ, ಬಾಲ್ಯವಿವಾಹ ನಿಷೇಧದಲ್ಲಿ ಕಡ್ಡಾಯವಾಗಿ ತೊಡಗಿಸಿ ಕೊಳ್ಳುತ್ತೇನೆ ಎಂಬ ಬಗ್ಗೆ ಪ್ರತಿಜ್ಞಾವಿಧಿ ಸ್ವೀಕರಿಸುವುದು.

xi. ಯುವಮೇಳದಲ್ಲಿ ಭಾಗವಹಿಸುವವರಿಂದ ಸಹಿ ಸಂಗ್ರಹ ಅಭಿಯಾನ ನಡೆಸುವುದು.

xii. ಯುವಮೇಳದಲ್ಲಿ ಭಾಗವಹಿಸುವ ಯುವಕ/ಯುವತಿಯರು ಹಾಗೂ ಭಾಗೀದಾರರಿಂದ ಹಾಜರಾತಿ ಪಡೆಯುವುದು.

**ತಾಲ್ಲೂಕು ಮಟ್ಟದ ಯುವಮೇಳ ಕಾರ್ಯಕ್ರಮಕ್ಕೆ ಕೆಳಕಂಡ ತಖ್ತೆಯಲ್ಲಿ ತಿಳಿಸಿರುವಂತೆಯೇ ಕಡ್ಡಾಯವಾಗಿ ಖರ್ಚು ವೆಚ್ಚಗಳನ್ನು ನಿಯಮಾನುಸಾರ ಭರಿಸುವುದು.**

| ಕ್ರ ಸಂ | ಖರ್ಚುಗಳ ವಿವರ | ಅನುದಾನ (ರೂ.ಗಳಲ್ಲಿ) |
|---|---|---|
| 1 | ವೇದಿಕೆ ಕಾರ್ಯಕ್ರಮ | 10,000.00 |
| 2 | ಸಂಪನ್ಮೂಲ ವ್ಯಕ್ತಿಗಳ ಗೌರವಧನ (ರೂ. 1000/- ಮೀರದಂತೆ), ವಿಚಾರ ಸಂಕೀರ್ಣ, ಪ್ರಬಂಧ ಸ್ಪರ್ಧೆ ವಿಜೇತರಿಗೆ ಪ್ರಶಸ್ತಿ ವಿತರಣೆ, | 8,000.00 |
| 3 | ಮಧ್ಯಾಹ್ನದ ಊಟ (250 ಜನರಿಗೆ) | 25,000.00 |
| 4 | LED ಬಾಡಿಗೆ, ವಿಡಿಯೋ ಪ್ರದರ್ಶನ | 12,000.00 |
| 5 | ಸಾಂಸ್ಕೃತಿಕ ಕಾರ್ಯಕ್ರಮ, ಕರಪತ್ರಗಳು, ಪೋಸ್ಟರ್, ಪ್ರತಿಜ್ಞಾವಿಧಿ, ಸಾಧಿಲ್ವಾರು ವೆಚ್ಚ, Xerox, ಪೋಟೋಗ್ರಾಫಿ, ಮತ್ತು ವರದಿ ತಯಾರಿಕೆ. | 15,000.00 |
| 6 | **ಒಟ್ಟು** | **70,000** |

**ಜಿಲ್ಲಾ ಮಟ್ಟದ ಯುವಮೇಳ ಕಾರ್ಯಕ್ರಮಕ್ಕೆ ಕೆಳಕಂಡ ತಖ್ತೆಯಲ್ಲಿ ತಿಳಿಸಿರುವಂತೆಯೇ ಕಡ್ಡಾಯವಾಗಿ ಖರ್ಚು ವೆಚ್ಚಗಳನ್ನು ನಿಯಮಾನುಸಾರ ಭರಿಸುವುದು.**

| ಕ್ರ ಸಂ | ಖರ್ಚುಗಳ ವಿವರ | ಅನುದಾನ (ರೂ.ಗಳಲ್ಲಿ) |
|---|---|---|
| 1 | ವೇದಿಕೆ ಕಾರ್ಯಕ್ರಮ | 15,000.00 |
| 2 | ವಿವಿಧ ಇಲಾಖೆಗಳ ಮಾಹಿತಿ ಮಳಿಗೆಗಳು (15 ಮಳಿಗೆಗಳು) | 80,000.00 |
| 3 | ಕರಪತ್ರಗಳು, ಪೋಸ್ಟರ್, ಪ್ರತಿಜ್ಞಾವಿಧಿ | 10,000.00 |
| 4 | ಪೋಟೊಗ್ರಾಫಿ, ವರದಿ ಸಿದ್ಧಪಡಿಸುವುದು. | 10,000.00 |
| 5 | ಸಂಪನ್ಮೂಲ ವ್ಯಕ್ತಿಗಳ ಗೌರವಧನ (ರೂ. 2000/- ಮೀರದಂತೆ), ವಿಚಾರ ಸಂಕೀರ್ಣ, ಪ್ರಬಂಧ ಸ್ಪರ್ಧೆ ವಿಜೇತರಿಗೆ ಪ್ರಶಸ್ತಿ | 15,000.00 |

| | | |
|---|---|---|
| | ವಿತರಣೆ, | |
| 6 | ಸಾಂಸ್ಕೃತಿಕ ಕಾರ್ಯಕ್ರಮ | 10,000.00 |
| 7 | ಮಧ್ಯಾಹ್ನದ ಊಟ (500 ಜನರಿಗೆ) | 50,000.00 |
| | LED ಬಾಡಿಗೆ, ವಿಡಿಯೋ ಪ್ರದರ್ಶನ | 15,000.00 |
| 8 | ಸಾಧಿಲ್ವಾರು ವೆಚ್ಚ, Xerox, ವರದಿ ತಯಾರಿಕೆ. | 15,000.00 |
| | **ಒಟ್ಟು** | **2,20,000.00** |

**ಮಾಹಿತಿ ಮಳಿಗೆಗಳು:**

- ಪ್ರಮುಖವಾಗಿ ಯುವಜನ ಸೇವೆ ಮತ್ತು ಸಬಲೀಕರಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಆರೋಗ್ಯ, ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕ ಇಲಾಖೆ, ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಸಂಸ್ಥೆ ಜೀವನೋಪಾಯ ಅಭಿಯಾನ, ICPS 1098 ಸಹಾಯವಾಣಿ, ಸಖಿ-ಒನ್ ಸ್ಟಾಪ್ ಸೆಂಟರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗಳಿಂದ ದೊರೆಯುವ ಸೌಲಭ್ಯಗಳ ಕುರಿತು ಮಳಿಗೆಗಳನ್ನು ಸ್ಥಾಪಿಸುವುದು.

- ಈಗಾಗಲೇ ಪ್ರಧಾನ ಕಛೇರಿಯಿಂದ (ತಮ್ಮ ಜಿಲ್ಲೆಗಳಿಗೆ ನೀಡಿರುವಂತಹ ಕಿರುಚಿತ್ರಗಳನ್ನು) ಕಡ್ಡಾಯವಾಗಿ ಬಾಲ್ಯವಿವಾಹ ಕುರಿತು ಕಿರುಚಿತ್ರ ಪ್ರದರ್ಶನ ಮಾಡುವುದು).

/1/23

ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು